# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 160/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಮಂಜುನಾಥ | **ಪ್ರಮಾಣ ಮಾಡಿಸಿದ ದಿನಾಂಕಃ** | |
| **ತಂದೆ/ಗಂಡನ ಹೆಸರು** | ಃ ಬಿ.ಎನ್. ಕೃಷ್ಣಮೂರ್ತಿ | **08.07.2025** | |
| **ವಯಸ್ಸು** | ಃ 33 ವರ್ಷ | | |
| **ವೃತ್ತಿ** | ಃ ಕೆ.ಆರ್.ಆಸ್ಪತ್ರೆಯ ಕ್ಯಾಂಟಿನ್ ಕೆಲಸ | **ಪ್ರಾ.ಸಾ.** ಃ | 17 |
| **ವಾಸಸ್ಥಳ** | ಃ ಬೆಂಡರವಾಡಿ ಗ್ರಾಮ ಚಾಮರಾಜನಗರ | **ಚಾ.ಸಾ.** ಃ | 10 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಪೊಲೀಸ್ ನೊಟೀಸ್ ಗಳನ್ನು ಮತ್ತು ಅಮಾನತ್ತು ಪಂಚನಾಮೆಗಳನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಪೊಲೀಸ್ ನೊಟೀಸ್, ಅಮಾನತ್ತು ಪಂಚನಾಮೆ, ಪೊಲೀಸ್ ನೊಟೀಸ್ ಮತ್ತು ಅಮಾನತ್ತು ಪಂಚನಾಮೆ ಗಳನ್ನು ಈಗಾಗಲೇ ನಿಪಿ-*10* ರಿಂದ ನಿಪಿ-*13* ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಗಳನ್ನು ನಿಪಿ-*10(ಬಿ), 11(ಬಿ), 12(ಬಿ)* ಮತ್ತು *13(ಬಿ)* ಎಂದು ಗುರುತಿಸಲಾಯಿತು. ನಾನು ದೇವರಾಜ ಪೊಲೀಸ್ ಠಾಣೆಗೆ ಟೀ ಮತ್ತು ಕಾಫಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ ನಾನು ಗ್ಲಾಸ್ ಗಳನ್ನು ತೆಗೆದುಕೊಂಡು ಬರುವಾಗ ಪೊಲೀಸರು ಒಂದು ಸಹಿ ಮಾಡು ಎಂದು ಹೇಳಿದರು ಆದ್ದರಿಂದ ನಾನು ಸಹಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು

ಪಡಿಸಿಕೊಂಡಿರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಆಗ ನೋಡಿರುವುದಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*1* ನೇ ಆರೋಪಿ ಸೋಮಶೇಖರ *@* ಸೋಮ ಈತನು ಮೃತ ಪ್ರಜ್ವಲ್ ಫೋನ್ ಮಾಡಲು ಬಳಸುತ್ತಿದ್ದ ರೆಡಮಿ ಮೊಬೈಲ್ ಅನ್ನು ಸಂಬಂಧಿಕರ ಮನೆಯಲ್ಲಿ ಇಟ್ಟಿರುತ್ತೇನೆ ಕರೆದುಕೊಂಡು ಹೋದರೆ ತೋರಿಸುತ್ತೇನೆ ಎಂದು ಹೇಳಿದ್ದು ಅಂಬೇಡ್ಕರ್ ಜ್ಞಾನಲೋಕದಲ್ಲಿ ಇರುವ ಜೆಎನ್ ನರ್ಮ್ ಹೌಸ್ ಬ್ಲಾಕ್ ನಂಬರ್ *7* ರ ಮನೆ ನಂಬರ್ ಎಸ್ *3* ಗೆ ಕರೆದುಕೊಂಡು ಹೋಗಿ ಮನೆಯ ಹಾಲ್ ನ ಫ್ರಿಡ್ಜ್ ನ ಮೇಲೆ ಇಟ್ಟಿದ್ದ ಮೊಬೈಲ್ ಅನ್ನು ಹಾಜರುಪಡಿಸಿದ್ದು ಪೊಲೀಸರು ನನ್ನ ಸಮಕ್ಷಮ ಅದನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆಗ ನಾನು ನಿಪಿ-*10* ಮತ್ತು *11* ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅದೇ ದಿನ ಕೃತ್ಯಕ್ಕೆ ಬಳಸಿದ್ದ ***Maruthi swift desire car No*. *KA*-*09*-*D*-*0929*** ಕಾರನ್ನು ಅದರ ಮಾಲಿಕರು ಹಾಜರುಪಡಿಸಿದ್ದು ನನ್ನ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಆ ಕಾರನ್ನು ಅಮಾನತ್ತು ಪಡಿಸಿಕೊಂಡು ನಿಪಿ-*13* ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-*12* ಮತ್ತು *13* ಕ್ಕೆ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ದಿನ *1* ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆರೋಪಿ ಪರ ವಕೀಲರು *1* ನೇ ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.)

ನಾನು *1* ನೇ ಆರೋಪಿತನನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದೆ ಮತ್ತು ಆತನನ್ನು ಕರೆದುಕೊಂಡು ಹೋದ ಮನೆಯಲ್ಲಿಯೂ ನೋಡಿದ್ದೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು